# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No**. 367/2024

| | | |
|---|---|---|
| ಸಾಕ್ಷಿದಾರರ ಹೆಸರು: | ಶಿವಕುಮಾರ್ | ಪ್ರಮಾಣ ಮಾಡಿದ ದಿನಾಂಕ 30.04.2026. |
| ತಂದೆಯ ಹೆಸರು: | ಸಿದ್ದಯ್ಯ | |
| ವಯಸ್ಸು: | 46 ವರ್ಷ | |
| ವೃತ್ತಿ: | ಖಾಸಗಿ ಕೆಲಸ | CW-3 |
| ವಾಸಸ್ಥಳ: | ಉಮ್ಮತ್ತೂರು | PW-3 |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ಸುಮಾರು 2 ವರ್ಷಗಳ ಹಿಂದೆ ಒಂದು ದಿನ ಪೊಲೀಸರು ಕೃತ್ಯದ ಸ್ಥಳದ ಮಹಜರ್ ಮಾಡಲು ನನ್ನ ಜೊತೆ ಚಾಸಾ-**2** ರವರನ್ನು ಪೊಲೀಸರು ಉಮ್ಮತ್ತೂರು ಗುಡ್ಡದ ಅರಣ್ಯ ಇಲಾಖೆಗೆ ಸೇರಿದ ನೀಲಗಿರಿ ತೋಟದಲ್ಲಿ ಮಹಜರ್ ಮಾಡಲು ನಮ್ಮನ್ನು ಕರೆದಿರುತ್ತಾರೆ. ಸಂಜೆ ಸುಮಾರು **3-30** ರಿಂದ **5** ಗಂಟೆಯ ವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಪೊಲೀಸರಿಗೆ ಕೃತ್ಯದ ಸ್ಥಳವನ್ನು ಚಾಸಾ-**1** ರವರು ತೋರಿಸಿರುತ್ತಾರೆ. ಆ ಸ್ಥಳದಲ್ಲಿ ಚಾಸಾ-**1** ರವರಿಗೆ ಸೇರಿದ ಕರಿಮಣಿ ಸರವನ್ನು ಯಾರೋ ಕಳ್ಳರು ಕಿತ್ತುಕೊಂಡು ಹೋಗಿರುತ್ತಾರೆ ಎಂಬ ಕಳ್ಳತನದ ಪ್ರಕರಣವಾಗಿರುತ್ತದೆ ಮಹಜರ್ ಮಾಡಲು ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಸಾಕ್ಷಿಗೆ ಈಗ ನಿಪಿ-**2** ನ್ನು ತೋರಿಸಲಾಗಿ ಸಾಕ್ಷಿಯು ನಿಪಿ-**2** ರಲ್ಲಿ ಇರುವ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-**2(**ಬಿ**)** ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಸಹಿಯನ್ನು ಮಹಜರ್ ಕ್ರಮ ಜರುಗಿಸಿದ ಸ್ಥಳದಲ್ಲಿಯೇ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ-**3**ನ್ನು ತೋರಿಸಲಾಗಿ ಸದರಿ ಛಾಯ ಚಿತ್ರವನ್ನು ಕೃತ್ಯದ ಸ್ಥಳದಲ್ಲಿ ತೆಗೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಚಾಸಾ-1 ನಮ್ಮ ಗ್ರಾಮಸ್ಥರು ಎಂದರೆ ಸರಿ. ಚಾಸಾ-1 ರವರು ನಮ್ಮ ಗ್ರಾಮಸ್ಥರಾಗಿರುವುದರಿಂದ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತವಾದ ಬಗ್ಗೆ ನಾನು ನೋಡಿರುವುದಿಲ್ಲ ಎಂದರೆ ಸರಿ. ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.